## ಮೈಕ್ರೋಸಾಫ್ಟ್ ಆಫೀಸ್ ಲೆನ್ಸ್

ಆ್ಯಂಡ್ರಾಯ್ಡ್‌ನ ಈ ಉಚಿತ ಆ್ಯಪ್ ದಾಖಲೆಗಳನ್ನು, ಕಾರ್ಡ್‌ಗಳನ್ನು ಸ್ಕ್ಯಾನ್ ಮಾಡುತ್ತದೆ. ಸ್ಪಷ್ಟವಾಗಿ ಓದಬಹುದು, ಜೊತೆಗೆ ಎಡಿಟ್ ಕೂಡಾ ಮಾಡಬಹುದು. ಇದಕ್ಕೆ ಒನ್‌ನೋಟ್ ಅಥವಾ ಮೈಕ್ರೋಸಾಫ್ಟ್ ಅಕೌಂಟ್‌ನ ಅವಶ್ಯಕತೆಯಿಲ್ಲ. ಓರೆಕೋರೆ ಲೈನುಗಳಿದ್ದರೆ ನೇರವಾಗಿಸುತ್ತದೆ. ಮುದ್ರಿತ ಅಕ್ಷರಗಳನ್ನು ಸ್ಕ್ಯಾನ್ ಮಾಡಿದಾಗ ಅದನ್ನು ಎಡಿಟ್ ಮಾಡುವ ಅವಕಾಶ ಈ ಆ್ಯಪ್‌ನಲ್ಲಿದೆ. ಗೂಗ್ಲ್ ಪ್ಲೇ ಸ್ಟೋರ್‌ನಿಂದ ಡೌನ್‌ಲೋಡ್ ಮಾಡಿಕೊಂಡ ನಂತರ ಎರಡು ಪ್ಯಾನೆಲ್‌ಗಳು ತೆರೆದುಕೊಂಡು ಅಲ್ಲಿ ನಿಮಗೆ ಸೂಚನೆಗಳು ಸಿಗುತ್ತವೆ. ಕ್ಯಾಮೆರಾ ಮೋಡ್‌ನಲ್ಲಿ ಆ್ಯಪ್ ತೆರೆದುಕೊಂಡು ದಾಖಲೆ ಅಥವಾ ಫೋಟೊ ಮೇಲೆ ಸ್ಕ್ಯಾನರ್ ಕೇಂದ್ರೀಕರಿಸಿ ಶಟರ್ ಬಟನ್ ಒತ್ತಿದರೆ ಸಾಕು. ಉಬ್ಬಿದ ಮೇಲ್ಮೈ ಇದ್ದರೆ ಇದು ಕಾರ್ಯ ನಿರ್ವಹಿಸುವುದಿಲ್ಲ.




## ವಾಟ್ಸಾಪ್ ಮೆಸೆಂಜರ್

ಇದು ಐಫೋನ್ ಆ್ಯಪ್. ಜಾಗತಿಕವಾಗಿ ಬಹಳಷ್ಟು ಬಳಕೆದಾರರಿದ್ದು, ಸ್ನೈಪ್ ಆಗುವುದು ಸುಲಭ, ಐಕ್ಲೌಡ್ ಬ್ಯಾಕಪ್‌ನ ಆಯ್ಕೆಯೂ ಇದೆ. ವೈಸ್ ಕರೆ ಸೌಲಭ್ಯವಿದ್ದು, ಸಂದೇಶ ಬಂದಾಗ ನಿಮ್ಮನ್ನು ಎಚ್ಚರಿಸುತ್ತದೆ. ಫೇಸ್‌ಬುಕ್ ಮೆಸೆಂಜರ್ ಅಥವಾ ಇತರ ಮೊಬೈಲ್ ಮೆಸೆಂಜರ್‌ನಲ್ಲಿ ಖಾತೆ ತೆರೆದು ಲಾಗಿನ್ ಆಗಬೇಕು. ಆದರೆ ಇದರಲ್ಲಿ ಮೊದಲ ಬಾರಿ ನಿಮ್ಮ ಫೋನ್ ನಂಬರ್ ಟೈಪ್ ಮಾಡಿದರಾಯಿತು. ಇದನ್ನು ವಾಟ್ಸಾಪ್ ದೃಢೀಕರಿಸಿ ಸಂದೇಶ ಕಳಿಸುತ್ತದೆ. ನಂತರ ನಿಮ್ಮ ಅಡ್ರೆಸ್ ಬುಕ್‌ನ ಇತರ ಬಳಕೆದಾರರನ್ನು ಪಟ್ಟಿ ಮಾಡುತ್ತದೆ. ಹಲವು ಬಳಕೆದಾರರಿಗೆ ಒಮ್ಮೆಲೇ ಸಂದೇಶ ಕಳಿಸುವ ಅವಕಾಶವೂ ಇದರಲ್ಲಿದೆ.




## ಡಬ್‌ಸ್ಮ್ಯಾಷ್




ಐಫೋನ್‌ನ ಈ ಆ್ಯಪ್‌ನಲ್ಲಿ ವಿವಿಧ ರೀತಿಯ ಹಿನ್ನೆಲೆ ಸಂಗೀತ, ಸದ್ದುಗಳ ದೊಡ್ಡ ಸಂಗ್ರಹ ಅಡಗಿದೆ. ಹೊಸ ಹೊಸ ಸದ್ದನ್ನು ನೀವೇ ಸೃಷ್ಟಿಸಿ ಎಡಿಟ್ ಕೂಡಾ ಮಾಡಬಹುದು. ನಿಮ್ಮಲ್ಲಿ ಹಾಸ್ಯಪ್ರಜ್ಞೆ ಇದ್ದರೆ ಇದರ ಮಜಾ ಅನುಭವಿಸಬಹುದು. ಅಂದರೆ ನಿಮ್ಮ ಸಂಭಾಷಣೆ ಅಥವಾ ವಿಡಿಯೋಗಳಿಗೆ ಈ ಚಿತ್ರವಿಚಿತ್ರ ಸದ್ದು ಅಥವಾ ಸಿನಿಮಾ ಹಾಡಿನ ಒಂದು ಸಾಲನ್ನು ಸೇರಿಸಿ ಫೇಸ್‌ಬುಕ್ ಮೆಸೆಂಜರ್ ಅಥವಾ ವಾಟ್ಸಾಪ್‌ನಲ್ಲಿ ಹರಿದಾಡಿಸಬಹುದು.




## ರೆಟ್ರೊ ರೆಕಾರ್ಡ್ ಪ್ಲೇಯರ್

ಆ್ಯಂಡ್ರಾಯ್ಡ್‌ನ ಈ ಆ್ಯಪ್ ಮೂಲಕ ಕೆಲವು ಆಯ್ದ ಸಂಗೀತದ ಆಲ್ಬಂ ಕೇಳಬಹುದು. ಈ ಉಚಿತ ಆ್ಯಪ್‌ನಲ್ಲಿ ಬಿಲ್ಟ್‌ಇನ್ ಇಕ್ವಲೈಜರ್ ಇದ್ದು ಇಂಪಾದ ಸಂಗೀತ ಕೇಳಲು ಸಾಧ್ಯ. ಇದು ಹಳೆಯ ರೆಕಾರ್ಡ್ ಪ್ಲೇಯರ್ ಅನ್ನು ಹೋಲುತ್ತದೆ, ವ್ಯತ್ಯಾಸವೆಂದರೆ ಡಿಜಿಟಲ್ ಅಷ್ಟೆ. ಎಂಪಿ3 ಮತ್ತು ಎಂಪಿ4 ಫೈಲ್‌ಗಳು ಲಭ್ಯ. ಟರ್ನ್‌ಟೇಬಲ್ ಮೇಲೆ ಟ್ಯಾಪ್ ಮಾಡಿದರೆ ಪಟ್ಟಿ ಕಾಣಿಸುತ್ತದೆ. ಇದನ್ನು ಪ್ಲೇಲಿಸ್ಟ್‌ಗೆ ಸೇರಿಸಬಹುದು. ಬೆರಳ ತುದಿಯಿಂದ ಪ್ಲೇ ಸಂಕೇತದ ಮೇಲೆ ಮುಟ್ಟಿದರೆ ರೆಕಾರ್ಡ್ ಪ್ಲೇಯರ್‌ನ ಹ್ಯಾಂಡಲ್ ಚಲಿಸಿದಂತೆ ಕಂಡು ಹಾಡು ಕೇಳಬಹುದು.

■ ಎಸ್. ತುಂಬೆ